# OCTOBER 17, 2025
# AKASHAVANI - DHARWAD
# PRADESH SAMACHARA (KANNADA) 12.00 P.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಬಳ್ಳಾರಿ ಜಿಲ್ಲೆ, ಸಿರುಗುಪ್ಪ ತಾಲೂಕು, ಬಾಗೇವಾಡಿ ಗ್ರಾಮದಲ್ಲಿ, 24 ಲಕ್ಷ ರೂಪಾಯಿ ವೆಚ್ಚದಲ್ಲಿ ಡಿಜಿಟಲ್ ಸ್ಪರ್ಷದೊಂದಿಗೆ, ಮೇಲ್ದರ್ಜೆಗೇರಿಸಲಾದ, ಗ್ರಂಥಾಲಯ ಅರಿವು ಕೇಂದ್ರಕ್ಕೆ, ಕೇಂದ್ರ ಹಣಕಾಸು ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್ ಭೇಟಿ ನೀಡಿ, ಮೆಚ್ಚುಗೆ ವ್ಯಕ್ತ ಪಡಿಸಿದರು. ಬಳಿಕ, ವಿದ್ಯಾರ್ಥಿಗಳು ಹಾಗೂ ಶಿಕ್ಷಕರೊಂದಿಗೆ ಸಂವಾದ ನಡೆಸಿದರು. ಗ್ರಾಮೀಣ ಅರಿವು ಕೇಂದ್ರದ ಗ್ರಂಥಾಲಯದಲ್ಲಿ, 5 ಸಾವಿರದ 800ಕ್ಕೂ ಹೆಚ್ಚು ಪುಸ್ತಕಗಳು, ಕೌಶಲ ತರಬೇತಿ ಕೇಂದ್ರ, ಒಳಾಂಗಣ ಕ್ರೀಡಾಂಗಣ ಹಾಗೂ ಸುಸಜ್ಜಿತ ಗಣಕಯಂತ್ರ ಕೇಂದ್ರವನ್ನು ಹೊಂದಿದೆ.

<><><>

ವಿಜಯನಗರ ಜಿಲ್ಲೆ, ಕೂಡ್ಲಿಗಿಯ ಕಾಸಪುರ ಗ್ರಾಮದಲ್ಲಿ, 350 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ಕಲ್ಯಾಣ ಸಂಪದ ಕಟ್ಟಡದಲ್ಲಿ ಹುಣಸೆ ಮತ್ತು ಶೇಂಗಾ ಸಂಸ್ಕರಣಾ ಘಟಕ ಹಾಗೂ ರೈತರ ತರಬೇತಿ ಕೇಂದ್ರವನ್ನು, ಕೇಂದ್ರ ಹಣಕಾಸು ಖಾತೆ ಸಚಿವರಾದ ನಿರ್ಮಲಾ ಸೀತಾರಾಮನ್ ಇಂದು ಬೆಳಗ್ಗೆ ಉದ್ಘಾಟಿಸಿದರು.

<><><>

ಆತ್ಮ ನಿರ್ಭರ ಭಾರತ ಸಂಕಲ್ಪದಡಿ, ಪ್ರತಿ ಮನೆ, ಸ್ವದೇಶಿ ವಸ್ತುಗಳನ್ನೇ ಬಳಸುವಂತೆ, ಕಳೆದ ಸೆಪ್ಟಂಬರ್ 25 ರಿಂದ, ಡಿಸೆಂಬರ್ 25ರ ವರೆಗೆ, ಬಳ್ಳಾರಿ ಜಿಲ್ಲೆಯಲ್ಲಿ, 'ಸ್ವದೇಶಿ ಆಂದೋಲನ' ಆಯೋಜಿಸಲಾಗಿದೆ ಎಂದು, ವಿಧಾನ ಪರಿ ‍ತ್ ಸದಸ್ಯ ವೈ. ಎಂ. ಸತೀಶ ತಿಳಿಸಿದ್ದಾರೆ. ಪಂಡಿತ ದೀನ ದಯಾಳ ಉಪಾಧ್ಯಾಯರ ಜನ್ಮ ದಿನದಿಂದು, ಸ್ವದೇಶಿ ವಸ್ತುಗಳ ಬಳಕೆ ಆಂದೋಲನಕ್ಕೆ ಚಾಲನೆ ನೀಡಲಾಗಿದ್ದು, ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮ ದಿನದ ವರೆಗೆ, ನಡೆಯಲಿದೆ ಎಂದರು.

<><><>

ಉತ್ತಮ ಆಹಾರ ಎಲ್ಲರಿಗೂ ಒದಗುವಂತಾಗಲು, ಸಾವಯವ ಕೃಷಿ ಪದ್ಧತಿಗೆ ಆದ್ಯತೆ ಹಾಗೂ ಉತ್ತೇಜನ ನೀಡಬೇಕು. ಕೃಷಿ ಹಾಗೂ ಪಶು ಸಖಿಯರು ಇಲಾಖೆ ಯೋಜನೆಗಳ ಬಗ್ಗೆ ರೈತರಿಗೆ ಹೆಚ್ಚಿನ ಅರಿವು ಮೂಡಿಸಬೇಕು ಎಂದು ಕೊಪ್ಪಳ ಜಿಲ್ಲಾಧಿಕಾರಿ ಡಾಕ್ಟರ ಸುರೇಶ ಇಟ್ನಾಳ್ ಹೇಳಿದರು. ಜಿಲ್ಲಾ ಪಂಚಾಯತ್ ಜೆ.ಹೆಚ್ ಪಟೇಲ್ ಸಭಾಂಗಣದಲ್ಲಿ ಆಯೋಜಿತ, 2025 ರ ವಿಶ್ವ ಆಹಾರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

<><><>

ಧ್ವನಿ: ಡಾಕ್ಟರ ಸುರೇಶ ಇಟ್ನಾಳ್ 39 ಸೆಕೆಂದುಗಳು

<><><>

ಯಾದಗಿರಿ ಜಿಲ್ಲೆಯಲ್ಲಿ, ಸಾವಿರದ 286 ಶಂಕಾಸ್ಪದ ಜ್ವರ ಹಾಗೂ ದದ್ದು ಪ್ರಕರಣಗಳು ವರದಿಯಾಗಿದ್ದು, ಜಿಲ್ಲೆ ರಾಜ್ಯಕ್ಕೆ 2ನೇ ಸ್ಥಾನದಲ್ಲಿದೆ. ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಅಧ್ಯಕ್ಷತೆಯಲ್ಲಿ ಜರುಗಿದ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಭೆಯಲ್ಲಿ, ಅಧಿಕಾರಿಗಳು ಈ ಮಾಹಿತಿ ನೀಡಿದರು. 23 ದಡಾರ, 27 ರುಬೆಲ್ಲಾ ಪ್ರಕರಣಗಳು ಸಹ ವರದಿಯಾಗಿವೆ. ನಾನ್ ಮೀಸಲ್ಸ್ ಹಾಗೂ ನಾನ್ ರುಬೆಲ್ಲಾ ದರ, ಶೇಕಡ 105 ದಶಾಂಶ 7 ರಷ್ಟಿದೆ.

<><><>

ನೈಸರ್ಗಿಕ ವಿಪತ್ತು ನಿರ್ವಹಣೆಗಾಗಿ, ಸ್ಕೌಟ್ಸ್ ಅಂಡ್ ಗೈಡ್ಸ್ ಸ್ವಯಂಸೇವಕರಿಗೆ, 'ಯುವ ಅಪಾಯ ಮಿತ್ರ ಯೋಜನೆ' ಅಡಿ, ತರಬೇತಿ ನೀಡಲಾಗುತ್ತಿದೆ ಎಂದು, ರಾಜ್ಯ ಸ್ಕೌಟ್ಸ್ ಮತ್ತು ಗೈಡ್ಸ್ ಮುಖ್ಯ ಆಯುಕ್ತ ಪಿ.ಜಿ.ಆರ್ ಸಿಂಧ್ಯಾ ತಿಳಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರದಲ ಆನ್ನಿಬೆಸೆಂಟ್ ಪಾರ್ಕ್‌ನಲ್ಲಿ ಭಾರತ್ ಸ್ಕೌಟ್ಸ್ ಆಂಡ್ ಗೈಡ್ಸ್ ವತಿಯಿಂದ, ಆಯೋಜಿಸಿದ್ದ, ವಿಪತ್ತು ನಿರ್ವಹಣಾ ಶಿಬಿರದಲ್ಲಿ ಭಾಗವಹಿಸಿ, ಮಾತನಾಡಿದರು. 7 ದಿನಗಳ ತರಬೇತಿಯಲ್ಲಿ, 400ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ.

<><><>

'ಹೃದಯ ಅನಾರೋಗ್ಯದ ತುರ್ತು ಸಂದರ್ಭದಲ್ಲಿ, ಪ್ರತಿ ಸೆಕೆಂದೂ ಅಮೂಲ್ಯ', ಎಂಬ ಧ್ಯೇಯದೊಂದಿಗೆ, 'ಕಾರ್ಡಿಯೋ ಪಲ್ಮನರಿ ರಿಸಸ್ಸಿಟೇಶನ – ಸಿ.ಪಿ.ಆರ್' ಹ್ಯಾಂಡ್ಸ್ ಆನ್, ಜಾಗೃತಿ ಸಪ್ತಾಹ, ಇಂದು ಮುಕ್ತಾಯಗೊಳ್ಳಲಿದೆ. ತುರ್ತು ಸಂದರ್ಭದಲ್ಲಿ ಜೀವ ಉಳಿಸಬಹುದಾದ, ಪ್ರಥಮ ಚಿಕಿತ್ಸೆ ಕೌಶಲ ಹಾಗೂ ಸುವರ್ಣ ಘಳಿಗೆಯಲ್ಲಿ, ಸೂಕ್ತ ಚಿಕಿತ್ಸೆ ದೊರಕಿಸುವ ಸಂಕಲ್ಪದಿಂದ, ಸಿ.ಪಿ.ಆರ್. ಜಾಗೃತಿ ಸಪ್ತಾಹವನ್ನು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ, ಆಚರಿಸಲಾಯಿತು.

<><><>

ಹಿರಿಯ ನಾಗರಿಕರ ಸೈಬರ್ ಅಪರಾಧ ಜಾಗೃತಿ ಉಪನ್ಯಾಸ ಕಾರ್ಯಕ್ರಮ, ನಾಳೆ ಮಧ್ಯಾಹ್ನ 3 ಗಂಟೆಗೆ, ಹುಬ್ಬಳ್ಳಿ ಹೊಸೂರ ನಲ್ಲಿರುವ, ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಹಿರಿಯರ ಹೆಜ್ಜೆ ವೇದಿಕೆಯಲ್ಲಿ ಜರುಗಲಿದೆ. ಹುಬ್ಬಳಿಯ ಸೈಬರ್ ಕ್ರೈಂ ವಿಭಾಗದ ಸಹಾಯಕ ಪೊಲೀಸ್ ಆಯುಕ್ತರಾದ ಶಿವರಾಜ ಕೆ. ಕಟಭಾವಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

<><><>

ಬೆಂಗಳೂರು, ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನಗಳ ಸಂಸ್ಥೆ– ನಿಮಾನ್ಸ್ ಸಭಾಂಗಣದಲ್ಲಿ ಇಂದಿನಿಂದ ಎರಡು ದಿನಗಳ 'ಮೆಂಟಲ್ ಹೆಲ್ತ್ ಸಂತೆ 4.0' ಕಾರ್ಯಕ್ರಮ ಆಯೋಜಿತವಾಗಿದೆ. ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ವಿಶೇಷ ಧ್ವನಿಸುರುಳಿ ಹಾಗೂ ಶಿಕ್ಷಣ, ಸಾಮುದಾಯಿಕ ಮಾಹಿತಿ ಕೈಪಿಡಿ ಬಿಡುಗಡೆ ನಡೆಯಲಿದೆ.

<><><>

ಧಾರವಾಡ ಆಕಾಶವಾಣಿ ಕೇಂದ್ರದ ಪರಿಸರದಲ್ಲಿ, ಮೈಕ್ರೊ ಫಿನಿಶ್ ವಾಲ್ವ್ಸ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆಯ ಸಿ.ಎಸ್.ಆರ್ ಅನುದಾನದ ಅಡಿ, ಹುಬ್ಬಳ್ಳಿಯ ವಸುಂಧರಾ ಫೌಂಡೇಶನ್ ಮೂಲಕ ಪಶ್ಚಿಮ ಘಟ್ಟದ ಅಪರೂಪದ ಗಿಡಗಳನ್ನು ನೆಟ್ಟು ಸಿದ್ಧಪಡಿಸಲಾದ ಮಿಯಾವಾಕಿ ಅರಣ್ಯದ ಉದ್ಘಾಟನೆ ಇಂದು ನೆರವೇರಿತು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ